ಸಂಖ್ಯೆ: ಇಸಿಇ/59/ಜಿಪಿಎಫ್/2012

ಅಬಕಾರಿ ಆಯುಕ್ತರ ಕಛೇರಿ,
ಒಕ್ಕಲಿಗರ ಭವನ, ಕೆ.ಆರ್.ಸಿ. ವೃತ್ತ,
ಬೆಂಗಳೂರು, ದಿನಾಂಕ: 22-08-2012.

ಇವರಿಗೆ,

1) ರಾಜ್ಯದ ಎಲ್ಲಾ ವಿಭಾಗಗಳ/ರಾಜ್ಯ ವಿಚಕ್ಷಣದಳದ ಅಬಕಾರಿ ಜಂಟಿ ಆಯುಕ್ತರುಗಳಿಗೆ
2) ರಾಜ್ಯದ ಎಲ್ಲಾ ಜಿಲ್ಲೆಗಳ ಅಬಕಾರಿ ಉಪ ಆಯುಕ್ತರುಗಳಿಗೆ,

ಮಾನ್ಯರೆ,

ವಿಷಯ: ಹಣ ತೆಗೆಯುವ ಮತ್ತು ಬಟವಾಡೆ ಅಧಿಕಾರಿಗಳು ಹಾಗೂ ಜಿ.ಪಿ.ಎಫ್. ಚಂದಾದಾರರಿಗೆ ಸೂಚನೆಗಳು.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಹಾಲೇಖಪಾಲರು, ಹಣ ತೆಗೆಯುವ ಮತ್ತು ಬಟವಾಡೆ ಅಧಿಕಾರಿಗಳು ಹಾಗೂ ಜಿ.ಪಿ.ಎಫ್. ಚಂದಾದಾರರಿಗೆ ಸೂಚನೆಗಳನ್ನು ನೀಡಿರುವ ಪತ್ರದ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು, ಸದರಿ ಪತ್ರದಲ್ಲಿನ ಅಂಶಗಳು ಸ್ವಯಂ ವೇದ್ಯವಾಗಿದ್ದು, ನಿರ್ದೇಶನಗಳಂತೆ ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ ಹಾಗೂ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರನ್ವಯ ಮುಂಗಡ ಹಣ ಮಂಜೂರಾತಿ ಮತ್ತು ಭಾಗಶ: ಅಂತಿಮ ವಾಪಸಾತಿ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸುವಾಗ ಈ ಕೆಳಕಂಡ ಅಂಶಗಳನ್ನು ಗಮನಿಸಿ ಆಕ್ಷೇಪಣೆಗಳಿಗೆ ಅವಕಾಶ ನೀಡದೆ ಅನಗತ್ಯ ಪತ್ರ ವ್ಯವಹಾರ/ವಿಳಂಬಕ್ಕೆ ಎಡೆಮಾಡಿಕೊಡದೆ ಸಮರ್ಪಕವಾದ ಪ್ರಸ್ತಾವನೆಗಳನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ.

1) ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರ ನಿಯಮ 15 ರನ್ವಯ ಮುಂಗಡ ಹಣ ಮಂಜೂರಾತಿಗೆ ಅಧಿಕಾರಿ/ನೌಕರರುಗಳಿಂದ ನಮೂನೆ-3ರಲ್ಲಿ ಹಾಗೂ ನಮೂನೆ 4(ತ್ರಿಪ್ರತಿಯಲ್ಲಿ) ಪಡೆದು **ನಿಯಮದಲ್ಲಿ ತಿಳಿಸಿರುವ ಕಾರಣಗಳಿಗೆ ಮಾತ್ರ** ಅಗತ್ಯ ದಾಖಲೆಗಳೊಂದಿಗೆ ಮಹಾಲೇಖಪಾಲರು ನೀಡಿರುವ ಪ್ರಸಕ್ತ ಸಾಲಿನ ತಃಖ್ತೆಯೊಂದಿಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

2) ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು 1957ರ ನಿಯಮ 25, 26, 27ರನ್ವಯ ಭಾಗಶ: ಅಂತಿಮ ವಾಪಸಾತಿ ಮಂಜೂರಾತಿಗೆ ಅಧಿಕಾರಿಗಳು/ನೌಕರರುಗಳು 20 ವರ್ಷಗಳ ಸೇವೆಯನ್ನು ಪೂರೈಸಿರಬೇಕು ಅಥವಾ 10 ವರ್ಷಗಳಿಗಿಂತ ಕಡಿಮೆ ಸೇವಾವಧಿ ಇರಬೇಕು. **ಆಯಾ ಕಾರಣಕ್ಕೆ ನಿಗಧಿ ಪಡಿಸಿರುವ ನಮೂನೆಗಳಲ್ಲಿ** ಮಾತ್ರ ಅಗತ್ಯ ದಾಖಲೆಗಳೊಂದಿಗೆ ಮಹಾಲೇಖಪಾಲರು ನೀಡಿರುವ ಪ್ರಸಕ್ತ ಸಾಲಿನ ತಃಖ್ತೆಯೊಂದಿಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

ತಮ್ಮ ವಿಶ್ವಾಸಿ,

ಅಬಕಾರಿ ಆಯುಕ್ತರ ಪರವಾಗಿ

## ಹಣ ತೆಗೆಯುವ ಮತ್ತು ಬಟವಾಡೆ ಅಧಿಕಾರಿಗಳು ಹಾಗೂ ಜಿ.ಪಿ.ಎಫ್ ಚಂದಾದಾರರಿಗೆ ಸೂಚನೆಗಳು

1. ಸಾಮಾನ್ಯ ಭವಿಷ್ಯ ನಿಧಿಯಿಂದ ಭಾಗಶಃ ಅಂತಿಮ ಸಂದಾಯವನ್ನು ಯಾವ ಜಿಲ್ಲಾ ಖಜಾನೆ ಅಥವಾ ಉಪ ಖಜಾನೆಯಲ್ಲಿ ಪಡೆಯುವ ಬಗ್ಗೆ ಸರಿಯಾದ ಮಾಹಿತಿಯನ್ನು ಭಾಗಶಃ ಅಂತಿಮ ಸಂದಾಯ ಅರ್ಜಿಯಲ್ಲಿ ನಮೂದಿಸತಕ್ಕದ್ದು.
2. ಜಿ.ಪಿ.ಎಫ್ ಅನುಸೂಚಿಯಲ್ಲಿ ಹಣ ತೆಗೆಯುವ ಮತ್ತು ಬಟವಾಡೆ ಅಧಿಕಾರಿಗಳ ಸಂಪೂರ್ಣ ಅಂಚೆ ವಿಳಾಸ, ಮೊಬೈಲ್ ಸಂಖ್ಯೆ, ಸ್ಥಿರ ದೂರವಾಣಿಯ ಸಂಖ್ಯೆಯನ್ನು ನಮೂದಿಸತಕ್ಕದ್ದು.
3. ಈ ಕಛೇರಿಯು ನೀಡುವ ವಾರ್ಷಿಕ ಲೆಕ್ಕ ಪಟ್ಟಿಯು ಚಂದಾದರರ ವೈಯುಕ್ತಿಕ ಪ್ರತಿಯಾಗಿರುತ್ತದೆ. ಯಾವುದೇ ಜಿ.ಪಿ.ಎಫ್ ಮುಂಗಡ ಅಥವಾ ಇತರೆ ವ್ಯವಹಾರಗಳಿಗೆ ದೃಢೀಕರಿಸಿದ ಫೋಟೋ ಕಾಪಿಯನ್ನು ಉಪಯೋಗಿಸಬಹುದಾಗಿದೆ.
4. ಈ ಕೆಳಕಂಡ ನಮೂನೆಯಲ್ಲಿ ಹಣತೆಗೆಯುವ ಮತ್ತು ಬಟವಾಡೆ ಅಧಿಕಾರಿಗಳು ತಮ್ಮ ಚಂದಾದರಾರ ಹೆಸರು, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ಜಿ.ಪಿ.ಎಫ್ ಖಾತೆಯ ಸಂಖ್ಯೆಯ, ಮತ್ತು ಮೊಬೈಲ್ ಸಂಖೆಯ ವಿವರಗಳನ್ನು ತಿಳಿಸಬೇಕಾಗಿ ಸೂಚಿಸಲಾಗಿದೆ.
5. ಈ ಕಛೇರಿಯ ವೆಬ್ ಸೈಟ್. www.agkar.cag.gov.in ರಿಂದ ಹಣ ತೆಗೆಯುವ ಮತ್ತು ಬಟವಾಡೆ ಅಧಿಕಾರಿಗಳು ತಮಗೆ ಬೇಕಾದ ಜಿ.ಪಿ.ಎಫ್ ಅರ್ಜಿನಮೂನೆಗಳನ್ನು ಪಡೆಯ ಬಹುದಾಗಿದೆ.
6. ಒಂದು ವೇಳೆ ಜಿ.ಪಿ.ಎಫ್ ಚಂದಾದಾರರು ವರ್ಗಾವಣೆಯಾದ ಪಕ್ಷದಲ್ಲಿ ಅಂತಹವರ ಜಿ.ಪಿ.ಎಫ್ ವಾರ್ಷಿಕ ಲೆಕ್ಕ ಪಟ್ಟಿಯನ್ನು ಅವರು ಕೆಲಸ ಮಾಡುವ ಸ್ಥಳಕ್ಕೆ ಕಳುಹಿಸಲು ಸೂಕ್ತ ಕ್ರಮ ಕೈಗೊಳ್ಳಬಹುದಾಗಿದೆ.
7. ಸಾಮಾನ್ಯ ಭವಿಷ್ಯ ನಿಧಿಯ ಖಾತೆಯನ್ನು ಹೊಂದಿರದ, (ಗ್ರೂಪ್ "ಡಿ" ಹೊರತುಪಡಿಸಿ) 1-04-2006ಕ್ಕಿಂತ ಹಿಂದಿನಿಂದ ಸೇವೆ ಸಲ್ಲಿಸುತ್ತಿರುವ ನೌಕರರಿಂದ, ಹೊಸ ಖಾತೆಯನ್ನು ಪ್ರಾರಂಭಿಸಲು ಭರ್ತಿ ಮಾಡಿದ ಅರ್ಜಿಯನ್ನು ಪಡೆದು ತಕ್ಷಣವೇ ಈ ಕಛೇರಿಗೆ ಕಳುಹಿಸತಕ್ಕದ್ದು.
8. ಸಾಮಾನ್ಯ ಭವಿಷ್ಯ ನಿಧಿಯ ವಾರ್ಷಿಕ ಲೆಕ್ಕ ಪಟ್ಟಿಯಲ್ಲಿ ತೋರಿಸಿರುವ ಋಣಾತ್ಮಕ ಅಂತಿಮ ಶಿಲ್ಕು, ಖಾತೆಯಲ್ಲಿರುವುದಕ್ಕಿಂತ ಹೆಚ್ಚುವರಿ ಹಣ ಪಡೆದಿರುವುದನ್ನು ಸೂಚಿಸುತ್ತದೆ. ಹಿಂಪಡೆದ ಹೆಚ್ಚುವರಿ ಹಣವನ್ನು ಖಾತೆದಾರರಿಂದ ದಂಡ ಬಡ್ಡಿಯ ಸಹಿತ ವಸೂಲಿ ಮಾಡಿ ಹೆಚ್ಚುವರಿ ಪಡೆದ ಮೊತ್ತವನ್ನು 8009-09-101 ಲೆಕ್ಕಶೀರ್ಷಿಕೆಗೆ ಹಾಗೂ ದಂಡ ಬಡ್ಡಿಯನ್ನು 0049-04-800-00. ಲೆಕ್ಕಶೀರ್ಷಿಕೆಗೆ ಜಮಾ ಮಾಡಿ, ಈ ಕಛೇರಿಗೆ ತಿಳಿಸಲು ಕ್ರಮತೆಗೆದುಕೊಳ್ಳತಕ್ಕದ್ದು.
9. ವಾರ್ಷಿಕ ಲೆಕ್ಕ ಪಟ್ಟಿಯ ನಕಲು ಪ್ರತಿಯನ್ನು ನೀಡಲು ಹಣತೆಗೆಯುವ ಮತ್ತು ಬಟವಾಡೆ ಅಧಿಕಾರಿಗಳ ನ ಸ್ವೀಕೃತಿಯ ಪತ್ರವನ್ನು ಹಾಗೂ ಸಂಬಂಧಪಟ್ಟ ಚಂದಾದಾರರ ಗುರುತಿನ ಚೀಟಿಯನ್ನು ಹಾಜರುಪಡಿಸಬೇಕಾಗುತ್ತದೆ.

### ಚಂದಾದರರ ವಿವರಣಾ ಪಟ್ಟಿಯ ಅನುಸೂಚಿ

| ಕ್ರಮ ಸಂಖ್ಯೆ | ಚಂದಾದಾರರ ಹೆಸರು | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ಜಿ.ಪಿ.ಎಫ್ ಖಾತೆಯ ಸಂಖ್ಯೆ | ಮೊಬೈಲ್ ಸಂಖ್ಯೆ | ಇ-ಮೈಲ್ ಐಡಿ |
|---|---|---|---|---|---|---|
| | | | | | | |
| | | | | | | |
| | | | | | | |
| | | | | | | |

Office of the Excise Commissioner
BANGALORE - 560 027.

ಕಛೇರಿಯ ಪೂರ್ಣ ಅಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆ

ಹಣ ತೆಗೆಯುವ ಮತ್ತು ಬಟವಾಡೆ ಅಧಿಕಾರಿಯವರ
ಸಹಿ ಮತ್ತು ಮೊಹರು.

ಗೆ
ವರಿಷ್ಠ ಲೆಕ್ಕಾಧಿಕಾರಿಗಳು (ಇಡಿಪಿ-ಜಿ.ಪಿ.ಎಫ್)
ಪ್ರಧಾನ ಮಹಾಲೇಖಾಧಿಕಾರಿ
(ಲೇ ಮತ್ತು ಹ) ಯವರ ಕಛೇರಿ,
ಪಾರ್ಕ್ ಹೌಸ್ ರಸ್ತೆ,
ಬೆಂಗಳೂರು – 560 001, ಕರ್ನಾಟಕ